# ರೈರಂಗಪುರದಿಂದ 'ರೈಸಿನಾ'ದತ್ತ...



■ ಪ್ರವೀಣ ಕುಲಕರ್ಣಿ

ದ್ರೌಪದಿ ಮುರ್ಮು! ಜಾರ್ಖಂಡ್‌ನ ರಾಜ್ಯಪಾಲೆ ಆಗಿದ್ದಾಗ ಆಗೊಮ್ಮೆ ಈಗೊಮ್ಮೆ ಸುದ್ದಿಯಾಗಿ, ನೇಪಥ್ಯಕ್ಕೆ ಸರಿದುಹೋಗುತ್ತಿದ್ದ ಈ ಹೆಸರು ಇದೀಗ ದೇಶದ ಪ್ರತಿಯೊಂದು ಮೂಲೆಯಲ್ಲೂ ಅನುರಣನಗೊಳ್ಳುತ್ತಿದೆ. ಏಕೆಂದರೆ, ರೈರಂಗಪುರದ ಈ ಸಾಧಕಿ ರೈಸಿನಾ ಹಿಲ್ಸ್‌ನ (ರಾಷ್ಟ್ರಪತಿ ನಿವಾಸ ಇರುವ ಪ್ರದೇಶ) ನಿವಾಸಿ ಆಗುವತ್ತ ದಾಪುಗಾಲು ಹಾಕಿದ್ದಾರೆ.

ರಾಷ್ಟ್ರಪತಿ ಚುನಾವಣೆಯಲ್ಲಿ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟದಿಂದ ಅಭ್ಯರ್ಥಿಯಾಗಿ ನಾಮಕರಣಗೊಂಡಿರುವ ದ್ರೌಪದಿ ಅವರು, ಆ ಹುದ್ದೆಗೆ ಏರುವ ಹಾದಿ ನಿಚ್ಚಳವಾಗಿದೆ. ಎನ್‌ಡಿಎಗೆ ಕೊರತೆ ಇರುವ ಮತಗಳನ್ನು ತುಂಬಿಕೊಳ್ಳುವ ಹಾದಿಯಲ್ಲಿ ಈಗಾಗಲೇ ಬಿಜೆಡಿ ನೆರವಿಗೆ ಧಾವಿಸಿದೆ. ಒಡಿಶಾದ ಮನೆ ಮಗಳನ್ನು ರೈಸಿನಾ ಹಿಲ್ಸ್‌ನ ನಿವಾಸಕ್ಕೆ ಕಳುಹಿಸಿಕೊಡಲು ನವೀನ್ ಪಟ್ನಾಯಕ್ ನೇತೃತ್ವದ ಬಿಜೆಡಿ ಉತ್ಸಾಹ ತೋರಿದ್ದರೆ, ಮುರ್ಮು ಅವರನ್ನೇ ಬೆಂಬಲಿಸುವ ಇಂಗಿತವನ್ನು ದಕ್ಷಿಣದ ಕೆಲವು ಪ್ರಾದೇಶಿಕ ಪಕ್ಷಗಳೂ ವ್ಯಕ್ತಪಡಿಸಿವೆ. ದ್ರೌಪದಿಯವರು ರಾಷ್ಟ್ರಪತಿ ಹುದ್ದೆಗೆ ಏರಿದ್ದೇ ಆದಲ್ಲಿ, ಹಲವು ಪ್ರಥಮಗಳಿಗೆ ಅವರು ಕಾರಣವಾಗಲಿದ್ದಾರೆ.

ಸ್ವಾತಂತ್ರ್ಯೋತ್ತರದಲ್ಲಿ ಜನಿಸಿ ರಾಷ್ಟ್ರಪತಿ ಹುದ್ದೆಗೆ ಏರಿದ ಮೊದಲ ವ್ಯಕ್ತಿ ಎನಿಸಲಿರುವ ಮುರ್ಮು (ಅವರಿಗೀಗ 64 ವರ್ಷ), ದೇಶದ ಈ ಅತ್ಯುನ್ನತ ಹುದ್ದೆಯನ್ನು ಅಲಂಕರಿಸುತ್ತಿರುವ ಬುಡಕಟ್ಟು ಜನಾಂಗದ ಮೊದಲ ಮಹಿಳೆಯಾಗಿಯೂ ದಾಖಲೆ ಬರೆಯಲಿದ್ದಾರೆ. ರಾಷ್ಟ್ರಪತಿಯಾದ ದೇಶದ ಎರಡನೇ ಮಹಿಳೆ ಎನ್ನುವ ಶ್ರೇಯವೂ ಅವರದಾಗಲಿದೆ (ಪ್ರತಿಭಾ ಪಾಟೀಲ ಮೊದಲನೆಯವರು). ಭಾರತದ ಪೂರ್ವ ಭಾಗದಿಂದ ಈ ಹುದ್ದೆಗೆ ಏರುತ್ತಿರುವ ಮೊದಲ ವ್ಯಕ್ತಿಯಾಗಿಯೂ ಅವರ ಹೆಸರು ಇತಿಹಾಸದ ಪುಟದಲ್ಲಿ ಸೇರ್ಪಡೆಯಾಗಲಿದೆ. ಬಿಜೆಪಿಯಿಂದ ಎರಡು ಬಾರಿ ಶಾಸಕಿಯಾಗಿ ಗೆದ್ದು, ಈ ಹಿಂದೆ ನವೀನ್ ಪಟ್ನಾಯಕ್ ನೇತೃತ್ವದ ಸಂಪುಟದಲ್ಲಿ ಸಚಿವೆಯಾಗಿ ಕೆಲಸ ಮಾಡಿರುವ ಮುರ್ಮು, ಮೂಲತಃ ಶಿಕ್ಷಕಿ. ತರಗತಿಯಲ್ಲಿ ಪಾಠ ಮಾಡುವುದೇ ಅವರ ಮೊದಲ ನೆಚ್ಚಿನ ಕಾಯಕ.

ಮಯೂರ್‌ಭಂಜ್‌ನ ಬೈದಾಪೋಸಿ ಗ್ರಾಮದಲ್ಲಿ ಜನಿಸಿದ ಮುರ್ಮು, ಭುವನೇಶ್ವರದ ರಮಾದೇವಿ ಮಹಿಳಾ ಕಾಲೇಜಿನಲ್ಲಿ ಓದಿದವರು. ಒಡಿಶಾ ಸರ್ಕಾರದ ನೀರಾವರಿ ಇಲಾಖೆಯಲ್ಲಿ ಕಿರಿಯ ಗುಮಾಸ್ತರಾಗಿ ಕೆಲಸಕ್ಕೆ ಸೇರಿದ್ದ ಅವರು, ಕೆಲಕಾಲ ಅಲ್ಲಿಯೇ ದುಡಿದವರು. ರೈರಂಗಪುರದ ಕೌನ್ಸಿಲರ್ ಆಗಿ ಗೆಲ್ಲುವ ಮೂಲಕ ರಾಜಕೀಯ ರಂಗಕ್ಕೆ ಧುಮುಕಿದವರು. ಮುಂದೆ ಬಿಜೆಪಿಗೆ ಸೇರ್ಪಡೆಯಾದ ಅವರು, ರಾಜ್ಯದ ಸಚಿವರಾಗಿಯೂ ಕೆಲಸ ಮಾಡಿದವರು.

ಎನ್‌ಡಿಎ ಸರ್ಕಾರ ಅವರನ್ನು ಜಾರ್ಖಂಡ್ ರಾಜ್ಯಪಾಲರನ್ನಾಗಿ ನೇಮಕ ಮಾಡಿತ್ತು. ರಾಜ್ಯಪಾಲರಾಗಿ ಐದು ವರ್ಷಗಳ ಅವಧಿಯನ್ನು ಅವರು ಪೂರ್ಣಗೊಳಿಸಿದ್ದರು. ಅವರು ರಾಜ್ಯಪಾಲರಾಗಿದ್ದಾಗ ರಾಜಭವನವನ್ನು ಜನರಿಗೆ ಮುಕ್ತವಾಗಿರಿಸಿದ್ದರು ಎಂದು ಅವರನ್ನು ಹತ್ತಿರದಿಂದ ಬಲ್ಲವರು ಹೇಳುತ್ತಾರೆ. 2017ರ ರಾಷ್ಟ್ರಪತಿ ಚುನಾವಣೆ ಸಂದರ್ಭದಲ್ಲೂ ಮುರ್ಮು ಅವರ ಹೆಸರು ಕೇಳಿಬಂದಿತ್ತು. ಆದರೆ, ಕೊನೆಗಳಿಗೆಯಲ್ಲಿ ರಾಮನಾಥ ಕೋವಿಂದ್ ಅವರ ಹೆಸರು ಅಂತಿಮಗೊಂಡಿತ್ತು. ಈ ಸಲ ರಾಷ್ಟ್ರಪತಿ ಹುದ್ದೆಗೆ ಅವರ ಹೆಸರು ಘೋಷಣೆಯಾದ ಕ್ಷಣ, 'ನನಗೆ ಈ ಸುದ್ದಿಯನ್ನೇ ನಂಬಲಾಗುತ್ತಿಲ್ಲ. ಭರಿಸಲಾಗದಷ್ಟು ಆನಂದವಾಗಿದೆ' ಎಂದು ಮುರ್ಮು ಭಾವುಕರಾಗಿ ಹೇಳಿದ್ದರು.

ಸಂತಾಲ ಬುಡಕಟ್ಟು ಸಮುದಾಯದ ಮುರ್ಮು ಅವರು ಎಲ್ಲ ಸಂಕೋಲೆಗಳನ್ನು ಮೀರಿ ಬೆಳೆದ ಎತ್ತರ ಬೆರಗುಗೊಳಿಸುತ್ತದೆ. ರಾಷ್ಟ್ರಪತಿ ಭವನ ಪ್ರವೇಶಿಸುವ ಅವಕಾಶ ಒದಗಿಬರುತ್ತಿರುವುದು ಖಚಿತವಾಗಿದ್ದರೂ ಅವರ ನಡವಳಿಕೆ ಎಂದಿನಂತೆ ಸಾದಾ ಸೀದಾತನದಿಂದಲೇ ಕೂಡಿದೆ. ಆದರೆ, ಅವರ ಖಾಸಗಿ ಬದುಕು ನೋವಿನಿಂದ ತುಂಬಿದೆ. ಪತಿ ಮಾತ್ರವಲ್ಲದೆ ಇಬ್ಬರು ಪುತ್ರರನ್ನೂ ಅವರು ಕಳೆದುಕೊಂಡಿದ್ದಾರೆ. ಏಕೈಕ ಪುತ್ರಿ ಭುವನೇಶ್ವರದಲ್ಲಿ ಬದುಕು ಕಟ್ಟಿಕೊಂಡಿದ್ದಾರೆ.

'ನಮ್ಮ ಬುಡಕಟ್ಟು ಜನ ಎಷ್ಟೊಂದು ಮುಗ್ಧರೆಂದರೆ ಅವರು ಪೊಲೀಸ್ ಠಾಣೆ ಇಲ್ಲವೇ ಕೋರ್ಟ್ ಕಚೇರಿ ಎಂದರೆ ಹೆದರುತ್ತಾರೆ. ದೊಡ್ಡ ಹುದ್ದೆಯಲ್ಲಿ ಬುಡಕಟ್ಟು ಜನರೇ ಇದ್ದರೆ, ಆಗ ಆ ವ್ಯವಸ್ಥೆಯ ಮೇಲೆ ಅವರಿಗೊಂದು ನಂಬಿಕೆ ಬರುತ್ತದೆ. ಅಮ್ಮ ದೇಶದ ಅತ್ಯುನ್ನತ ಹುದ್ದೆಯ ಸನಿಹದಲ್ಲಿರುವುದು ಸಂತಸ ತಂದಿದೆ' ಎನ್ನುತ್ತಾರೆ ಮುರ್ಮು ಅವರ ಪುತ್ರಿ ಇತಿಶ್ರೀ. ಅಮ್ಮನ ಬಗೆಗೆ ಅವರಿಗೋ ಎಲ್ಲಿಲ್ಲದ ಹೆಮ್ಮೆ.

ಮುರ್ಮು ಅವರ ಗ್ರಾಮಸ್ಥರು, ತಮ್ಮೂರಿನ ಮಹಿಳೆ ದೇಶದ ಅತ್ಯುನ್ನತ ಹುದ್ದೆಗೆ ಏರಿದರೆ ತಮ್ಮ ಊರಿಗೊಬ್ಬರು ಕಾಯಂ ವೈದ್ಯರು ಸಿಗಬಹುದು ಎಂಬ ಆಶಾಭಾವದಲ್ಲಿದ್ದಾರೆ. 'ಒಂದುವೇಳೆ ನಾನು ಆ ಹುದ್ದೆಗೆ ಆಯ್ಕೆಯಾದರೆ ನನ್ನೂರಿನ ಜನರ ಆಶಯ ಈಡೇರಿಸುವುದಷ್ಟೇ ಅಲ್ಲ, ದೇಶದ ಉದ್ದಗಲಕ್ಕೂ ಹರಡಿರುವ ನನ್ನೆಲ್ಲ ದೇಶಬಾಂಧವರ ಆಕಾಂಕ್ಷೆಗೆ ತಕ್ಕಂತೆ ನಡೆದುಕೊಳ್ಳುವ ಇರಾದೆಯೂ ನನ್ನದು' ಎಂದು ಮುರ್ಮು ಹಸನ್ಮುಖರಾಗಿ ಹೇಳುತ್ತಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65